**ಕೃಷ್ಣಮೂರ್ತಿ ಹನೂರು**
ಕಲೆ: ಮುರಳೀಧರ ರಾಠೋಡ್

## ಮೊದಲ ಬಂಡಾಯದ ದನಿ, ಸಮಾನತೆಯ ಹರಿಕಾರ ಹರಿಹರ ದೇವ ಕವಿ–ಕಾವ್ಯ ಅವಲೋಕನ

# ‘ನಿಮ್ಮ ಕೆರ್ಪಿಂಗೆನ್ನ ಶಿರ ಸರಿಯೇ’

**ಹಳಗನ್ನಡ ಸಾಹಿತ್ಯದ ರುಚಿ ಮತ್ತು ಅಂದವನ್ನು ಓದುಗರಿಗೆ ಪರಿಚಯಿಸುವ ಮಾಲಿಕೆ ‘ನಿಚ್ಚಂ ಪೊಸತು’. ಪಳಗಿದ ಓದುಗರಿಗೆ ಹಳಗನ್ನಡದ ಚೆಲುವನ್ನು ನೆನಪು ಮಾಡಿಕೊಡುವ, ಹೊಸ ಓದುಗರಿಗೆ ಅದರ ರುಚಿಯನ್ನು ತಾಕಿಸುವ ಉದ್ದೇಶದ ಈ ಮಾಲಿಕೆ – ಹಳಗನ್ನಡ ಕಾವ್ಯದ ಆಯ್ದ ಪ್ರಖರ ಪದ್ಯಭಾಗಗಳನ್ನಿಟ್ಟುಕೊಂಡು ಅವುಗಳ ಸ್ವಾರಸ್ಯ, ಭಾಷಾವಿಶೇಷ, ಛಂದಸ್ಸು, ರಸಾಸ್ವಾದದ ಸಾಧ್ಯತೆಗಳ ಕುರಿತು ಚರ್ಚಿಸಲಿದೆ.**

ಹದಿಮೂರನೆಯ ಶತಮಾನದ ಕವಿ ಹರಿಹರ ದೇವನ ಒಂದು ರಗಳೆಯ ಹೆಸರು ‘ತಿರುನಾಳ್ ಪೋವರು’ ಎಂದಿದೆ. ತಿರುನಾಳ್ ಅಂದರೆ ಹಬ್ಬ–ಜಾತ್ರೆ, ಪೋವರು ಎಂದರೆ ಹೋಗುವವರು ಎಂದಾಗುತ್ತದೆ. ತಿರುನಾಳ್ ಪೋವರು ಎಂಬ ಈ ತಮಿಳು–ಕನ್ನಡ ಕಥನದ ಶೀರ್ಷಿಕೆಯೇ ವಿಚಿತ್ರವಾಗಿದೆ. ತಮಿಳುನಾಡಿನ ಚೋಳಮಂಡಲದ ಅದನೂರು ಗ್ರಾಮದಲ್ಲಿ ಕಂಡಕಂಡವರ ಮನೆಯಲ್ಲಿ ಜೀತ ಮಾಡಿಕೊಂಡಿದ್ದ ಈ ತಿರುನಾಳ್ ಪೋವನಿಗೆ ಪೊನ್ನಾಂಬಲದ ಶಿವನ ಜಾತ್ರೆಗೆ ಹೋಗಿ ಅಲ್ಲಿಯ ದೈವವನ್ನು ಕಂಡು ಬರಬೇಕೆಂಬ ಆಸೆ. ಆದರೆ, ನಿತ್ಯ ಊರ ಬೀದಿಗಳಲ್ಲಿ ಬಿಟ್ಟಿ ಚಾಕರಿ ಮಾಡುವವನ ಅಂತರಂಗದ ಆಸೆಗೆ ಅವಕಾಶವೆಲ್ಲಿ? ಹೀಗೆ ಹನ್ನೆರಡು ವರ್ಷ ಕಳೆದೇ ಹೋಯಿತು. ಊರೆಲ್ಲ ನಿಕೃಷ್ಟವಾಗಿ ಕಾಣುತ್ತಿದ್ದ ಈ ತಿರುನಾಳ್ ಪೋವನ ಪಾತ್ರ ಕುರಿತು ಹರಿಹರ ಬರೆಯುವ